## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್–ಸಂಖ್ಯೆ 129 ರಲ್ಲಿ ದಿನಾಂಕ:24.08.2021 ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು.**

ದಿನಾಂಕ: 24.08.2021 ರಂದು ವಾರ್ಡ್ ಸಂಖ್ಯೆ 129ರ ಸೆಪ್ಟಂಬರ್ ಮಾಹೆಯ ವಾರ್ಡ್ ಸಮಿತಿ ಸಭೆಯನ್ನು ಸ್ಥಳೀಯ ನಿವಾಸಿಗಳ ಕೋರಿಕೆಯ ಮೇರೆಗೆ ಜೂಮ್ ಮೀಟಿಂಗ್ ಮುಖೇನ ನಡೆಸಲಾಯಿತು. ಈ ಕೆಳಕಂಡಂತೆ ಸದಸ್ಯರು / ಸಾರ್ವಜನಿಕರು ಭಾಗವಹಿಸಿರುತ್ತಾರೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಶ್ರೀ.ಜೆ.ವಿಶ್ವನಾಥ್, ವಾರ್ಡ್ 129 ನೋಡಲ್ ಅಧಿಕಾರಿ
2. ಶ್ರೀ ಬಸವರಾಜು ಎನ್, ಸಹಾಯಕ ಕಾರ್ಯಪಾಲಕ ಅಭಿಯಂತರರು ರಾಜರಾಜೇಶ್ವರಿ ನಗರ ಉಪ ವಿಭಾಗ.
3. ಶ್ರೀ.ಮಂಜುನಾಥ್ ಆರ್ ಮಾರ್ಷಲ್ ವಾರ್ಡ್–129
4. ಶ್ರೀ.ಭಟ್, ವಾರ್ಡ್–129 14ನೇ ಬ್ಲಾಕಿನ ಕ್ಷೇಮಾಭಿವೃದ್ಧಿ ಸಂಘದ ಪರವಾಗಿ
5. ಶ್ರೀಮತಿ ಶೋಭಾ ಭಟ್, ವಾರ್ಡ್–129 14ನೇ ಸ್ಥಳೀಯ ನಿವಾಸಿ 3ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿನಗರ.
6. ಶ್ರೀ.ರಾಮಣ್ಣ, ಸ್ಥಳೀಯ ನಿವಾಸಿ, ಎನ್.ಜಿ.ಇ.ಎಫ್ ಬಡಾವಣೆ, ಮಲ್ಲತ್ತಹಳ್ಳಿ
7. ಶ್ರೀ.ವಿಜಯ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–129
8. ಶ್ರೀ.ವಿ.ಉಡುಪ, ಅನ್ನಪೂರ್ಣೇಶ್ವರಿನಗರ, ಮತ್ತು ಇತರರು.

ಕೋವಿಡ್–19 ವೈರಾಣು ವ್ಯಾಪಕವಾಗಿ ಹರಡುತ್ತಿರುವುದರಿಂದ ಹಾಗೂ ಪ್ರತಿ ಮಾಹೆ ನಡೆಸಲಾಗುತ್ತಿದ್ದ ವಾರ್ಡ್ ಸಮಿತಿಯ ಸಭೆಯನ್ನು ಜೂಮ್ ಮೀಟಿಂಗ್ ಅನ್ವಯ ಎಲ್ಲಾರನ್ನು ಆಹ್ವಾನಿಸಿ ಸಭೆಯನ್ನು ನಡೆಸಲಾಯಿತು. ಸದರಿ ಜೂಮ್ ಮೀಟಿಂಗ್‌ನಲ್ಲಿ ಭಾಗವಹಿಸಿದ್ದ, ಎಲ್ಲಾ ಸ್ಥಳೀಯ ನಿವಾಸಿಗಳನ್ನು/ಸದಸ್ಯರನ್ನು ಸ್ವಾಗತಿಸುತ್ತಾ, ಸಭೆಯನ್ನು ನೋಡಲ್ ಅಧಿಕಾರಿಗಳು ವಾರ್ಡ್ 129 ರವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲಾಯಿತು.

- ಶ್ರೀಗಂಧದ ಕಾವಲು ಮುಖ್ಯರಸ್ತೆ, ಹೆಲ್ತ್ ಬಡಾವಣೆ ನಾಗರಬಾವಿ ನಿವಾಸಿಯಾದ ಶ್ರೀಮತಿ ಸೋನಿ ಶರ್ಮ ರವರು ತಮ್ಮ ಮನೆಯ ಪಕ್ಕದಲ್ಲಿ ಫುಟ್ ಪಾತ್ ಮೇಲೆ ಬೀಡಾ ಸ್ಟಾಲ್ ಅಂಗಡಿ ನಡೆಸುತ್ತಿದ್ದು, ಇಲ್ಲಿಗೆ ಬರುವ ಗ್ರಾಹಕರು ತಮ್ಮ ಮನೆಯ ಗೇಟ್ ಮುಂಭಾಗಕ್ಕೆ ಬಂದು ಧೂಮಪಾನ ಮಾಡುತ್ತಿರುವುದರಿಂದ ಮನೆಯಲ್ಲಿ ವಾಸವಿರುವ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ವಸತಿ ಪ್ರದೇಶದಲ್ಲಿ ಇರುವ ಅಂಗಡಿಯ ವಾಣಿಜ್ಯ ಪರವಾನಗಿಯನ್ನು ಪರಿಶೀಲಿಸಿ ಅನಧಿಕೃತವಾಗಿದ್ದಲ್ಲಿ ತೆರವುಗೊಳಿಸಬೇಕೆಂದು ಕಳೆದೆರಡು ಸಭೆಗಳಲ್ಲಿ ಕೋರಿದ್ದರು, ಅದರಂತೆ ಪರಿಶೀಲಿಸಿ ತೆರವುಗೊಳಿಸಲಾಯಿತು.
- ಎನ್.ಜಿ.ಇ.ಎಫ್ ಬಡಾವಣೆ, ನಾಗರಬಾವಿ 2ನೇ ಹಂತದ ಪಾರ್ಕ್ ಎದುರು ಕಲ್ವರ್ಟ್ ~~ಯೂಂಪ್~~ ಹಾಳಾಗಿದ್ದು ಸಾರ್ವಜನಿಕರ ಓಡಾಟಕ್ಕೆ ಅನಾನುಕೂಲ ಉಂಟಾಗಿರುತ್ತದೆಯೆಂದು ಕಳೆದ ಸಭೆಯಲ್ಲಿ ಚರ್ಚಿಸಲಾಗಿತ್ತು, ಅದರಂತೆ ~~ಯೂಂಪ್ ತೆರವುಗೊಳಿಸಲಾಗಿರುತ್ತದೆ~~.

➢ ಹೆಲ್ತ್ ಬಡಾವಣೆಯಲ್ಲಿರುವ ವಿಟಿಯು ಸ್ಥಳೀಯ ಕಛೇರಿ ಸುತ್ತಮುತ್ತ ಮೂರು ರಸ್ತೆಗಳ ಚರಂಡಿ ಅಭಿವೃದ್ಧಿಪಡಿಸಲು ಅಲ್ಲಿನ ನಿವಾಸಿಗಳು ಕೋರಿದರು. ಇದಕ್ಕೆ ಉತ್ತರಿಸಿದ ವಾರ್ಡ್ ಅಭಿಯಂತರರು ಆದ್ಯತೆಯ ಮೇರೆಗೆ ಮುಂಬರುವ ಅನುದಾನಲ್ಲಿ ಸದರಿ ಚರಂಡಿಗಳನ್ನು ಅಭಿವೃದ್ಧಿಪಡಿಸಲಾಗುವುದೆಂದು ತಿಳಿಸಿದರು.

➢ ಶ್ರೀಮತಿ ಸೋನಿ ಶರ್ಮರವರು ಕೆಬ್ಬೆಹಳ್ಳ ಮುಖ್ಯರಸ್ತೆಯಲ್ಲಿ ಚಿಕನ್ ಅಂಗಡಿಯ ಮಾಲೀಕರು ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಂಡು ಪಾದಾಚಾರಿ ಮಾರ್ಗದ ಮೇಲೆ ಶಾಶ್ವತವಾಗಿ ಪೆಟ್ಟಿಗೆಯನ್ನು ನಿರ್ಮಿಸಿರುವುದಾಗಿ ದೂರು ನೀಡಿ ತೆರವುಗೊಳಿಸಲು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿಗಳು ಕೂಡಲೇ ತೆರವುಗೊಳಿಸಲು ಸ.ಕಾ.ಅ(ರಾರಾ ನಗರ ಉಪ ವಿಭಾಗ) ರವರಿಗೆ ಸೂಚಿಸಿದರು.
ಕ್ರಮ: ಸ.ಕಾ.ಅ (ರಾರಾ ನಗರ ಉಪ ವಿಭಾಗ)

➢ 129 ರ ವ್ಯಾಪ್ತಿಯಲ್ಲಿ ಬಹುತೇಕ ರಸ್ತೆಗಳಲ್ಲಿ ಉದ್ಭವಾಗಿರುವ ರಸ್ತೆಗುಂಡಿಗಳೂ/ರಸ್ತೆ ಅಗೆತವನ್ನು ಕೂಡಲೇ ಗುರುತಿಸಿ / ದಾಖಲಿಸಿಕೊಂಡು ಆದ್ಯತೆ ಮೇರೆಗೆ ತುರ್ತಾಗಿ ಮುಚ್ಚಲು ಕ್ರಮವಹಿಸಬೇಕೆಂದು ನೋಡಲ್ ಅಧಿಕಾರಿಯವರು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು ಇದಕ್ಕೆ ಉತ್ತರಿಸಿ ಸಹಾಯಕ ಅಭಿಯಂತರರು ಡಾಂಬರು ಮಿಶ್ರಣ ಪೂರೈಸಲು ಬೇಡಿಕೆ ಸಲ್ಲಿಸಿದ್ದು, ಡಾಂಬರು ಮಿಶ್ರಣ ದೊರೆತ ನಂತರ ರಸ್ತೆ ಗುಂಡಿ ಮುಚ್ಚಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.
ಕ್ರಮ: ಸ.ಕಾ.ಅ ಮತ್ತು ಸಹಾಯಕ ಅಭಿಯಂತರರು ವಾರ್ಡ್-129 (ರಾರಾ ನಗರ ಉಪ ವಿಭಾಗ)

➢ ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ವತಿಯಿಂದ ರಸ್ತೆ ಅಗೆದ ನಂತರ ಮರುಪೂರಣಗೊಳಿಸುತ್ತಿಲ್ಲವೆಂದು ಸಾರ್ವಜನಿಕರು ದೂರು ನೀಡಿದರು. ಇದಕ್ಕೆ ಉತ್ತರಿಸಿದ ವಾರ್ಡ್ ಅಭಿಯಂತರರು ಭೂಗತ ಕೇಬಲ್ ಅಳವಡಿಸಲು ಕೇಂದ್ರ ಕಚೇರಿಯ ಒಎಫ್‌ಸಿ ವಿಬಾಗದಿಂದ ಅನುಮತಿ ಪಡೆದು ರಸ್ತೆ ಅಗೆದಿರುತ್ತಾರೆ. ಸದರಿ ರಸ್ತೆ ಗುಂಡಿಗಳನ್ನು ಮುಚ್ಚಲು ವಿಶೇಷ ಅನುದಾನ ನೀಡಲು ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುಮೋದನೆ ದೊರೆತ ನಂತರ ಆದ್ಯತೆಯ ಮೇರೆಗೆ ರಸ್ತೆ ಗುಂಡಿಗಳನ್ನು ಮುಚ್ಚಲು ಅಗತ್ಯ ಕ್ರಮ ವಹಿಸಲಾಗುವುದು.

ಈ ಹಿಂದೆ ಸ್ಥಳೀಯ ನಿವಾಸಿಗಳೂ ದಾಖಲಾಗಿರುವ ದೂರುಗಳಿಗೆ ಸಂಬಂದಿಸಿದಂತೆ, ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮವಹಿಸಿ ಮುಂದಿನ ಸಭೆಯಲ್ಲಿ ತಿಳಿಸಬೇಕೆಂದು ಕೋರುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-129

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-129

ಪ್ರತಿಯನ್ನು:-

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ಜಂಟಿ ಆಯುಕ್ತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
3. ಮುಖ್ಯ ಅಭಿಯಂತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
4. ಕಾರ್ಯಪಾಲಕ ಅಭಿಯಂತರರು ರಾ.ರಾ.ನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅದಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.